**<u>ದಿನಾಂಕ : *09-05-2025* ರಂದು ಸಾಕ್ಷಿಗೆ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಪಾಟೀ ಸವಾಲು : *2* ನೇ ಎದರುದಾರರ ಪರ ಶ್ರೀ ಐ ಎಸ್ ವಾಯ್ ವಕೀಲರಿಂದ</u>**

ಸಂತೋಷ ರವರು ನನ್ನ ಗಂಡ. ಅಪಘಾತವಾದ ನಂತರ ದೂರನ್ನು ನಾವು ನೀಡಿರುತ್ತೇವೆ. ಸುದೀಪ ರವರು ನನ್ನ ಗಂಡನ ಸ್ನೇಹಿತನಾಗಿದ್ದು, ಅವರು ನನ್ನ ಗಂಡನನ್ನು ಬೆಂಗಳೂರಿಗೆ ಕಾರಿನಲ್ಲಿ ಕರೆದುಕೊಂಡು ಹೋಗುತ್ತಿರುವಾಗ ಓವರ್ ಟೇಕ್ ಮಾಡುವಾಗ ಅಪಘಾತ ವಾಗಿದೆ ಎಂದು ದೂರು ನೀಡಿರುತ್ತೇವೆ. ಸುದೀಪ ರವರ ವಿಳಾಸ ಗೊತ್ತಿರುವುದಿಲ್ಲ. ಆದರೆ ಅವರು ಶಿವಮೊಗ್ಗದಲ್ಲಿ ವಾಸ ಮಾಡುತ್ತಾರೆ. ಸುದೀಪ ರವರು ನನ್ನ ಗಂಡನ ಸ್ನೇಹಿತ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಪಘಾತವಾದಾಗ ಕಾರಿನ ಚಾಲಕ ಮತ್ತು ಮಾಲೀಕ ಸುದೀಪ ರವರು ಆಗಿದ್ದರು ಎಂದರೆ ಸರಿ. ಕಾರಿನ ನಂಬರ 0606 ಇರುತ್ತದೆ. ನನ್ನ ಗಂಡ ಸುದೀಪ ರವರ ಕಾರನ್ನು ಬಾಡಿಗೆ ನಾತೆಯ ಆಧಾರದ ಮೇಲೆ ತೆಗೆದುಕೊಂಡು ಹೋರಟಿದ್ದರು ಎಂದರೆ ಸರಿಯಲ್ಲ. ಪರಿಹಾರದ ಹಣವನ್ನು ಪಡೆಯುವದಕ್ಕೊಸ್ಕರ ಸುದೀಪ ರವರು ನನ್ನ ಗಂಡನ ಸ್ನೇಹಿತ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಕಾರಿನಲ್ಲಿ ನನ್ನ ಗಂಡ, ಸುದೀಪ ಮತ್ತು ಅವರ ಹೆಂಡತಿ ಇದ್ದರು. ನನ್ನ ಗಂಡ ಸುದೀಪ ರವರ ಪಕ್ಕದಲ್ಲಿ ಕುಳಿತುಕೊಂಡಿದ್ದರು. ಸುದೀಪ ರವರ ಹೆಂಡತಿ ಕಾರಿನಲ್ಲಿ ಹಿಂದುಗಡೆ ಕುಳಿತುಕೊಂಡಿದ್ದರು. ಸುದೀಪ ರವರು ಸೀಟ್ ಬೆಲ್ಟ ಹಾಕಿಕೊಂಡಿರುವ ಬಗ್ಗೆ ನನಗೆ ಗೊತ್ತಿರುವುದಿಲ್ಲ. ನನ್ನ ಗಂಡ ಸೀಟ ಬೆಲ್ಟನ್ನು ಹಾಕಿಕೊಂಡಿರಲಿಲ್ಲ. ನನ್ನ ಗಂಡ ಸೀಟ ಬೆಲ್ಟ ಹಾಕಿಕೊಂಡಿದ್ದರೆ ಅಪಘಾತದ ತೀವ್ರತೆ ಕಡಿಮೆಯಾಗಿ ಅವರು ಬದುಕುಳಿಯುವ ಸಾದ್ಯತೆ ಇತ್ತು ಎಂದರೆ ಸಾಕ್ಷಿದಾರರು ನನಗೆ ಅಷ್ಟಾಗಿ ಗೊತ್ತಿರುವುದಿಲ್ಲ ಎಂದು ಹೇಳುತ್ತಾರೆ. ಸುದೀಪ ರವರು ಸೀಟ ಬೇಲ್ಟ ಹಾಕಿದ್ದರಿಂದ ಅವರಿಗೆ ಕೇವಲ ಸಾದಾ ಸ್ವರೂಪದ ಗಾಯಗಳಾಗಿರುತ್ತವೆ ಎಂದರೆ ಸರಿ. ನನ್ನ ಗಂಡ ಸೀಟ ಬೆಲ್ಟ ಹಾಕಿಕೊಳ್ಳದೇ ಇರುವುದರಿಂದ ಅವರ ತಪ್ಪಿನಿಂದ ಸದರಿ ಅಪಘಾತವು ಸಂಭವಿಸಿರುತ್ತದೆ ಎಂದರೆ ಸರಿಯಲ್ಲ. ಆದ್ದರಿಂದ ಪರಿಹಾರದ ಹಣವನ್ನು ಕೊಡಲು 2 ನೇ ಎದರುದಾರರು ಭಾದಸ್ತರಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ತೀರಿಕೊಂಡ ನಂತರ ವಾರಸುದಾರರು ಯಾರು ಎಂದು ತಹಶೀಲ್ದಾರ ರವರಿಂದ ಪ್ರಮಾಣ ಪತ್ರವನ್ನು ಪಡೆದುಕೊಂಡಿರುತ್ತೇವೆ. ಅದನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ಗಂಡನಿಗೆ ತಂದೆ, ತಾಯಿ ಮತ್ತು ಅವಿವಾಹಿತ ಸಹೋದರ ಇರುತ್ತಾರೆ. ನನ್ನ ಗಂಡನ ಸಹೋದರರನ್ನು ಈ ಪ್ರಕರಣದಲ್ಲಿ ಸೇರಿಸಿರುವುದಿಲ್ಲ. ನಾನು ಒಬ್ಬಳೇ ವಾರಸುದಾರಳು ಎಂದು ಸುಳ್ಳು ಅರ್ಜಿಯನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು ಜುಲೈ 2022 ರ ವೇತನ ಪ್ರಮಾಣ ಪತ್ರವನ್ನು ಮಾತ್ರ ಹಾಜರು ಪಡಿಸಿರುತ್ತೇನೆ. ನನ್ನ ಗಂಡ ತೀರಿಕೊಳ್ಳುವ ಮೊದಲಿನ 6 ತಿಂಗಳಿನ ವೇತನ

ಪ್ರತ್ರಗಳನ್ನು ಹಾಜರು ಪಡಿಸಲು ಯಾವುದೇ ತೊಂದರೆ ಇರುವುದಿಲ್ಲ. ನನ್ನ ಗಂಡನಿಗೆ ಮೂಲ ವೇತನ ಎಷ್ಟು ಇತ್ತು ಎಂದು ಗೊತ್ತಿರುವುದಿಲ್ಲ. ಆದರೆ ಅವರು 29 ಸಾವಿರ ಮತ್ತು ಅದಕ್ಕಿಂತ ಹೆಚ್ಚು ಸಂಬಳವನ್ನು ತೆಗೆದುಕೊಳ್ಳುತ್ತಿದ್ದರು. ನನ್ನ ಗಂಡನ ವೇತನ ಪ್ರಮಾಣ ಪತ್ರವನ್ನು ಈ ಪ್ರಕರಣಕ್ಕೆ ಅನುಕೂಲ ಆಗಲಿ ಎಂದು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ವೇತನ ಪ್ರಮಾಣ ಪತ್ರವನ್ನು ವಲಯ ಅರಣ್ಯ ಅಧಿಕಾರಿಗಳು, ಸಕ್ಕರೆಬೈಲು ವನ್ಯ ಜೀವಿ ವಲಯ, ಗಾಜನೂರು ರವರು ನೀಡಿರುತ್ತಾರೆ. ವಲಯ ಅರಣ್ಯಾ ಅಧಿಕಾರಿಗಳನ್ನು ಸಾಕ್ಷಿ ಮಾಡಿಸಲು ಯಾವುದೆ ತೊಂದರೆ ಇರುವುದಿಲ್ಲ. ಸುದೀಪ ರವರ ನಿರ್ಲಕ್ಷತನದಿಂದ ಅಪಘಾತ ಸಂಬವಿಸಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡ ಅರಣ್ಯ ಇಲಾಖೆಯಲ್ಲಿ ಫಾರೆಸ್ಟ ಗಾರ್ಡ ಎಂದು ಕೆಲಸ ಮಾಡುತ್ತಿರಲಿಲ್ಲ ಮತ್ತು ಅವರಿಗೆ ತಿಂಗಳಿಗೆ 40 ಸಾವಿರ ರೂ.ಗಳ ವೇತನ ಇರಲಿಲ್ಲ ಎಂದರೆ ಸರಿಯಲ್ಲ. ನನ್ನ ಗಂಡನ ಜಮೀನು ಇರುವ ಬಗ್ಗೆ ಉತಾರೆಯನ್ನು ಹಾಜರು ಪಡಿಸಿರುವುದಿಲ್ಲ. ನನ್ನ ಗಂಡನಿಗೆ ಪ್ರತಿ ವರ್ಷ 1 ಲಕ್ಷ ರೂ.ಗಳ ಆದಾಯ ಕೃಷಿ ಯಿಂದ ಬರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಹೆಚ್ಚಿನ ಪರಿಹಾರದ ಹಣವನ್ನು ಪಡೆಯುವದಕ್ಕೊಸ್ಕರ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

( ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಿದೆ )

ಓ. ಹೇ. ಕೇ. ಸರಿ ಅದೆ.

HANAMANTARAO R KULKARNI

Digitally signed by HANAMANTARAO R KULKARNI
Date: 2025.05.12 09:18:02 +0530

ಹಿರಿಯ ದಿವಾಣಿ ನ್ಯಾಯಾಧೀಶರು,
ಹಾಗೂ ಜೆ.ಎಮ್.ಎಫ್.ಸಿ, ಹುನಗುಂದ.